SRI R. GUNDU RAO (Chief Minister)—

(a) No.

(b) Does not arise in view of answer to clause (a)

(c) do

(d) do

(e) do

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—(ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ ಆದರ ಈ ಘಟನೆ ನಡೆದಿರುವ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಂದಿದೆ, ಪೋಲೀಸ್ ಕಮಿಷನರ್‌ರವರು ಸಹ ಹೇಳಿಕೆ ಕೊಟ್ಟಿದ್ದಾರೆ. ಒಬ್ಬ ಸಬ್ ಇನ್ಸ್‌ಪೆಕ್ಟರ್‌ರವರಿಗೆ ಆ ಗಲಾಟೆಯಲ್ಲಿ ಘಾಯವಾಗಿದೆ, ಮತ್ತೆ ೮ ಜನ ನಾಗರೀಕರಿಗೂ ಘಾಯಗಳಾಗಿವೆ ಇದರಲ್ಲಿ ಯಾವುದು ನಿಜ?

ಶ್ರೀ ಆರ್. ಗುಂಡೂರಾವ್.—ನೀವು ಕೇಳಿರುವ ವಿಷಯವೇನಿವೆ ಎಂದರೆ ಪೋಲೀಸರು ಹೋಗಿದ್ದರೇ ಇಲ್ಲವೇ ಎಂದು ಕೇಳಿದ್ದೀರಿ ಅದಕ್ಕೆ ಇಲ್ಲವೆಂದು ಉತ್ತರ ಕೊಟ್ಟಿದೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಗಾಂಧಿ ಜಯಂತಿಯ ದಿವಸದಂದು ಪೋಲೀಸಿನವರು ಈ ಗ್ರಾಮಕ್ಕೆ ನುಗ್ಗಿ ಅಲ್ಲಿದ್ದ ಹೆಣ್ಣುಮಕ್ಕಳು, ಮಕ್ಕಳು ಮರಿಗಳನ್ನು ಸಹ ಥಳಿಸಿರುವ ವಿಷಯ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಗಾಂಧಿ ಜಯಂತಿಯ ದಿವಸದಂದ ೮ ಜನ ನಿರಪರಾಧಿಗಳನ್ನು ಅವರ ಮನೆಯಲ್ಲಿದ್ದವರನ್ನು ಪೋಲೀಸ್ ಸ್ಟೇಷನ್ನಿಗೆ ಎಳೆದುಕೊಂಡು ಹೋಗಿದ್ದಾರೆ. ಈ ದುರಾವೃಷ್ಟಕರವಾದ ದುರ್ಘಟನೆಯಲ್ಲಿ ಭಾಗವಹಿಸದೇ ಇರತಕ್ಕಥ ೮ ಜನರನ್ನು ಏನು ಹಿಡಿದುಕೊಂಡು ಹೋಗಿದ್ದರು ಅವರನ್ನು ರಾತ್ರಿ ೮ ಗಂಟೆಗೆ ಬಿಡಿಸಿಕೊಂಡು ಬಂದಿದ್ದಾರೆ. ಪೋಲೀಸಿನವರು ನಿರಪರಾಧಿ ಹುಡುಗರು, ಹೆಣ್ಣು ಮಕ್ಕಳಿಗೆ ಹೊಡೆದಿರುವ ಬಗ್ಗೆ, ಮೆಡಿಕಲ್ ರಿಪೋರ್ಟ್ ಇವೆ. ಬೇಕಾದರೆ ತಮಗೆ ಕಳುಹಿಸಿ ಕೊಡುತ್ತೇನೆ. ಆದುದರಿಂದ ಇದರ ಬಗ್ಗೆ ತಾವು ಏನು ಕ್ರಮವನ್ನು ಕೈಗೊಳ್ಳುತ್ತೀರಾ?

ಶ್ರೀ ಆರ್. ಗುಂಡೂರಾವ್.—ತಾವು ಪ್ರಶ್ನೆ ಕೇಳಿರುವುದು ಏನೆಂದರೆ ೨-೧೦-೮೧ ರಂದು ರಾತ್ರಿ ೯-೩೦ ಗಂಟೆಯಲ್ಲಿ ಬಾನಸವಾಡಿ ಗ್ರಾಮಕ್ಕೆ ಪೋಲೀಸಿನವರು ಬಂದು ಮಕ್ಕಳು ಹಾಗೂ ಮಹಿಳೆಯರನ್ನು ಥಳಿಸಿರುವುದು ನಿಜವೇ ಎಂದು ಕೇಳಿದ್ದೀರಿ, ಅವಕ್ಕೆ ಇಲ್ಲವೆಂದು ಹೇಳಿದ್ದೇನೆ. ಆದರೆ ಅಲ್ಲಿ ನಡೆದಿರತಕ್ಕಂಥ ಘಟನೆಯೇ ಬೇರೆ, ಅದಕ್ಕೆ ತಮ್ಮ ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೇನೆ. ಆ ಘಟನೆಯ ಬಗ್ಗೆ ಕೇಸ್ ರಿಜಿಸ್ಟರ್ ಮಾಡಿ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ನಾನು ಕೇಳುತ್ತಿರುವುದು ಸಹ ನಡೆದಿರತಕ್ಕ ಘಟನೆಯ ಬಗ್ಗೆಯೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಆದರೆ ಆ ದಿನ ವಿನಾಕಾರಣ ಮನೆಗೆ ನುಗ್ಗಿ ಮಕ್ಕಳು, ಹೆಣ್ಣುಮಕ್ಕಳು ಮರಿಗಳನ್ನು ಥಳಿಸಿರುವುದು ಸರಿಯೇ ? ಮತ್ತೆ ಇಪತ್ತಿನವರೆಗೂ ಹಲವಾರು ನಿರಾಪರಾಧಿಗಳು ಕೋರ್ಟ್ ಕಛೇರಿಗೆ ಅಲೆದಾಡುತ್ತಿದ್ದಾರೆ, ಏನು ತಪ್ಪು ಮಾಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಲಿ, ಅದರ ಬಗ್ಗೆ ನಾವು ಏನೂ ಅಡ್ಡಿಪಡಿಸುವುದಿಲ್ಲ. ಇವತ್ತು ಯಾರು ಹುಡುಗರ ಮೇಲೆ ವಿನಾಕಾರಣ ಕೇಸ್ ಹಾಕುವುದರಿಂದ ಅವರು ಶಾಲಾ ಕಾಲೇಜ್‌ಗಳಿಗೆ ಹೋಗುವುದಕ್ಕೆ ತೊಂದರೆ ಯಾಗಿದೆ, ಆದಕೋಸ್ಕರವಾಗಿ ತಾವು ಆ ರೀತಿಯಾಗಿ ಕೇಸ್ ಹಾಕಿರತಕ್ಕದನ್ನು ವಿತ್ ಡ್ರಾ ಮಾಡುವುದಕ್ಕೆ ಪೋಲೀಸಿನವರಿಗೆ ಸೂಚನೆ ನೀಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅದನ್ನು ಈಗಲೇ ಏನೂ ಹೇಳುವುದಕ್ಕೆ ಬರುವುದಿಲ್ಲ.

Periodicity of Murders during 1980-81

474 SRI G. RAJUGOWDA (Hanur)—Will the chief Minister be pleased to state.—

(a) what is the periodicity of murder during the year 1980-81 in Karnataka State;

(b) what is the periodicity of Molestation/Rape during the year 1980-81

(c) what is the periodicity of Abduction/Kidnapping of women during the year 1980-81;

(d) what is the periodicity of Dacoity/Robbery during the year 1980-81;

(e) what is the periodicity of death due to vehicle accident during the year 1980-81 ?

SRI R. GUNDU RAO (Chief Minister)—

1980	1981
(a) One for every 10.05 hours	One for every 9.3 hours
(b) One for every 14.3 hours	Oue for every 15.3 hours
(c) One for every 31 hours	One for every 34 hours
(d) One for every 9.5 hours	One for every 9:18 hours .
(e) One for every 4.9 hours	One for every 4·1 hours

ಶ್ರೀ ಜಿ. ರಾಜಗೌಡ. ಸ್ವಾಮಿ ನಮ್ಮ ರಾಜ್ಯದಲ್ಲಿ ವಾಹನಗಳ ಅಪಘಾತದಿಂದ ಸರಾಸರಿ ೪ ಗಂಟೆಗೊಂದರಂತೆ ಸಾವು ಸಭವಿಸುತ್ತಿದ್ದೆಂದು ಹೇಳಿದ್ದಿರಿ. ಅವರಲ್ಲೂ ಬೆಂಗಳೂರಿನಲ್ಲಿ ಈ ಅಪಘಾತಗಳು ಜಾಸ್ತಿಯಾಗುತ್ತಿರುವುದರಿಂದ, ನಗರದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸಲು ಪ್ರಯಾಣಿಕರಿಗೆ ಅನುಕೂಲವಾಗುವಂತೆ ನಗರದ ಸುತ್ತ ರೈಲ್ವೆ ಟ್ರಾಕನ್ನು ಹಾಕುವುದಕ್ಕೆ ಸರ್ಕಾರ ಶೀಘ್ರವಾಗಿ ಪ್ರಯತ್ನ ಮಾಡುತ್ತದೆಯೇ ? ಮತ್ತು ಈ ರಸ್ತೆ ಅಪಘಾತಗಳು ಬೆಂಗಳೂರು ಮೈಸೂರು ರಸ್ತೆಯಲ್ಲಿ ಜಾಸ್ತಿಯಾಗುತ್ತಿರುವುದರಿಂದ ದಯವಿಟ್ಟು ಮೈಸೂರು–ಬೆಂಗಳೂರು ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಜನಸಂಖ್ಯೆ ವಿಪರೀತವಾಗಿ ಏರುತ್ತಿದೆ. ಅದೇ ಪ್ರಕಾರವಾಗಿ ವಾಹನಗಳ ಸಂಚಾರ ಕೂಡ ಜಾಸ್ತಿಯಾಗುತ್ತಿದೆ ಅದಕ್ಕೋಸ್ಕರವಾಗಿ ನಾವು ಒಂದು ಸರ್ಕ್ಯುಲರ್ ರೈಲ್ವೆ ಹಾಕಬೇಕೆಂದು ಈಗಾಗಲೇ ಕೇಂದ್ರ ಸರ್ಕಾರದವರೊಡನೆ ವ್ಯವಹಾರ ನಡೆಸಿದ್ದೇವೆ. ಅವರು ಸಹ ಸರ್ವೆ ಮಾಡಿ ಕೃಪೆ ಕೈಗೊಳ್ಳುತ್ತೇವೆಂದು ಇತ್ತೀಚೆಗೆ ಮಾನ್ಯ ಕೇಂದ್ರದ ರೈಲ್ವೆ ಮಂತ್ರಿಗಳವರು ಹೇಳಿದ್ದಾರೆ. ಇದು ಬಹಳ ದೂರದ ಆಲೋಚನೆಯಿಂದ ಕೂಡಿರತಕ್ಕದ್ದು. ಆದುದರಿಂದ ಇಲ್ಲಿಗೆ ಒಂದು ಸರ್ಕ್ಯುಲರ್ ಟ್ರೈನ್ ಬರುವ ರೀತಿಯಲ್ಲಿ ನಮ್ಮ ಸರ್ಕಾರ ಕೇಂದ್ರ ಸರ್ಕಾರದವರೊಡನೆ ವ್ಯವಹಾರ ಮಾಡುತ್ತಿದ್ದೇವೆ. ಇನ್ನು ಡಬ್ಬಲ್ ರೋಡ್ ಮಾಡುವ ಬಗ್ಗೆ ಹೇಳಿದ್ದಾರೆ, ಇದಕ್ಕೆ ಆರ್ಥಿಕವಾಗಿ ಬಹಳ ಹಣ ಖರ್ಚಾಗುತ್ತದೆ ಆದರೂ ಸಹ ಕೇಂದ್ರ ಸರ್ಕಾರದ ಟ್ರಾನ್ಸ್‌ಪೋರ್ಟ್ ಅಬ್ಬಂದಿಯವರೊಡನೆ ವ್ಯವಹರಿಸುತ್ತೇವೆ, ಇದಕ್ಕೂ ಸಹ ಹೆಚ್ಚಿನ ಹಣದ ಸಹಾಯ ಬೇಕಾಗುತ್ತದೆ, ಮತ್ತೆ ಆಗ ಇದರ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಜಿ. ರಾಜುಗೌಡ.—ತಾವು ಕೊಟ್ಟಿರತಕ್ಕ ಮಾಹಿತಿಯು ಪ್ರಕಾರವಾಗಿ ರಾಜ್ಯದಲ್ಲಿ ಪ್ರತಿ ೯ ಗಂಟೆಗೊಂದರಂತೆ ಕೊಲೆ ನಡೆದಿದೆ. ಮತ್ತೆ ಪ್ರತಿ ೯ ಗಂಟೆಗೊಂದರಂತೆ ದರೋಡೆ ಮತ್ತೆ ೧೫ ಗಂಟೆಗೊಂದರಂತೆ ಮಹಿಳಾಪಹರಣ ನಡೆದಿದೆ, ಇದು ಬೇರೆ ರಾಜ್ಯಗಳಿಗಿಂತ ಹೆಚ್ಚಾಗಿ ನಡೆದಿದೆ, ಆದುದರಿಂದ ಇದಕ್ಕೆ ಕಾರಣ ನಮ್ಮಲ್ಲಿ ಸಾಕಷ್ಟು ಪೋಲೀಸ್ ಪಡೆ ಇಲ್ಲದೇ ಇರುವುದರಿಂದ ಈ ರೀತಿಯಾಗಿ ನಡೆಯುತ್ತಿರುವುದರಿಂದ ಆ ಪೋಲೀಸ್ ಪಡೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ನೆರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಬಹಳ ಕಡಿಮೆ, ಆದರೂ ನಮ್ಮಲ್ಲಿರುವ ಪೋಲೀಸ್ ಸಂಖ್ಯೆಯನ್ನು ಇನ್ನು ಸ್ವಲ್ಪ ಜಾಸ್ತಿ ಮಾಡಬೇಕು ಎನ್ನುವುದರಲ್ಲಿ ನನ್ನ ವಿರೋಧವಿಲ್ಲ.

ಶ್ರೀ ಕೆ. ರಾಮಭಟ್.—ಬೇರೆ ಬೇರೆ ತರಹದ ಅಪರಾಧಗಳ ಸಂಖ್ಯೆಯ ವಿವರವನ್ನು ತಾವು ಇಲ್ಲಿ ಕೊಟ್ಟಿದ್ದೀರಿ ಇದರಲ್ಲಿ ಯಾವ ಜಿಲ್ಲೆಯಲ್ಲಿ ವಿಶೇಷವಾಗಿ ಈ ತರಹದ ಅಪರಾಧಗಳು ಆಗಿವೆ ಎನ್ನುವುದನ್ನು ಏನಾದರೂ ತಾವು ಗುರುತಿಸಿದ್ದೀರಾ?

ಶ್ರೀ ಆರ್. ಗುಂಡೂರಾವ್.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇವೆ.

Working of Vigilance Commission

594 SRI R. AMBANNA NAYAK(Manvi).—Will the Chief Minister be pleased to state :—

(a) the number of Class III, Class II and Class I officers have been trapped by the State Government's Vigilance Squad and who are kept still under suspension (Department wiseinformation is necessary) ;

(b) the number of reports submitted to the Government pertaining to these officers caught by the Vigilance Sqnad after conducting Departmental enquiry and enquiry by the Vigilance Commission and after conducting all other enquiries ;

(c) whether it has come to the notice of the Government that due to the abnormal delay in taking final decision on these reports results which has tarnished the image of administration and public life ;

(d) if so, the steps taken by the Government to improve these matters ?

SRI R. GUNDU RAO (Chief Minister).-(a)100 officers/staff members have been trapped by the State Vigilance Commission for the period from November 1980 to January, 1982. Out of them, 54 persons have been kept under suspension. (Details have been given in Annexure).

(b) 32.

(c) No abnormal delay is being caused in taking final decision towards these reports. Therefore tarnishing the image of Administration and public life does not arise.

(d) This question does not arise in view of reply furnished to clause (c) above.